ಕಟ್ಟದೆ ವಿರಳವಾಗಿ ಮನೆಗಳನ್ನು ಕಟ್ಟಿದ್ದರೂ, ವಿದ್ಯುತ್ ವಿತರಣೆ ವ್ಯವಸ್ಥೆಯನ್ನು ಮಂಡಳಿಯು ನಿರ್ಮಾಣ ಮಾಡಿದೆ. ಮನೆ ಕಟ್ಟಿರುವ ಮಾಲೀಕರುಗಳಿಗೆ ವಿದ್ಯುತ್ ಸಂಪರ್ಕವನ್ನು ವ್ಯವಸ್ಥೆ ಮಾಡಿದೆ. ಇನ್ನೂ ಮನೆಗಳು ಕಟ್ಟದೆ ಇರುವ ಜಾಗಗಳಲ್ಲಿ ಮಂಡಳಿಯ ಕೆಲವು ಸಾಮಾಗ್ರಿಗಳು ಕಳ್ಳತನಗೊಂಡಿರುವುದೂ ಸಹ ಗಮನಕ್ಕೆ ಬಂದಿದೆ.

ಸದರಿ ಬಡಾವಣೆಯಲ್ಲಿ ಟ್ಯೂಬ್‌ಲೈಟ್ ಪಿಟ್ಟಿಂಗ್‌ಗಳನ್ನು ಹಾಕಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಟ್ಯೂಬ್‌ಲೈಟ್ ಪಿಟ್ಟಿಂಗ್‌ಗಳನ್ನು ಒದಗಿಸಿದ್ದು, ಈ ಎಲ್ಲಾ 400 ಟ್ಯೂಬ್‌ಲೈಟ್ ಪಿಟ್ಟಿಂಗ್‌ಗಳನ್ನು ಅಲ್ಲಿನ ನಿವಾಸಿಗಳ ಸಂಘದೊಡನೆ ಸಮಾಲೋಚಿಸಿ ಅವರು ಅಪೇಕ್ಷಿಸಿದ ಸ್ಥಳಗಳಲ್ಲಿಯೇ ಟ್ಯೂಬ್‌ಲೈಟ್ ಪಿಟ್ಟಿಂಗ್‌ಗಳನ್ನು ಹಾಕಿದೆ. ಬಾಕಿ ಉಳಿದ ಸ್ಥಳಗಳಲ್ಲಿ ಬೀದಿ ದೀಪಗಳನ್ನು ಹಾಕಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಟ್ಯೂಬ್‌ಲೈಟ್ ಪಿಟ್ಟಿಂಗ್‌ಗಳನ್ನು ಮಂಡಳಿಗೆ ಒದಗಿಸಬೇಕಾಗುತ್ತದೆ.

ಈಗಾಗಲೇ ಇಂಧನ ಇಲಾಖೆಯ ವಿಷಯ ಸಮಿತಿಯ ಅಧ್ಯಕ್ಷರು ಈ ವಿಷಯದಲ್ಲಿ ಮಂಡಳಿಯ ಅಧ್ಯಕ್ಷರಿಗೆ ಬರೆದ ಪತ್ರದ ಬಗ್ಗೆ ವಿವರವಾದ ವರದಿಯು ಪೂರ್ವ ವಿಭಾಗದ ಕಾರ್ಯ ನಿರ್ವಾಹಕ ಇಂಜಿನೀಯರ್ (ವಿದ್ಯುತ್) ರವರಿಂದ ನಿರೀಕ್ಷಿಸಲ್ಪಡುತ್ತಿರುವುದರಿಂದ ಸದರಿ ಅಧಿಕಾರಿಯವರು ನೀಡುವ ವರದಿಯನ್ನು ಸವಿವರವಾಗಿ ಪರಿಶೀಲಿಸಿ, ಅಸಮರ್ಪಕ ಕಾರ್ಯಗಳೇನಾದರೂ ಜರುಗಿರುವುದು ಕಂಡುಬಂದಲ್ಲಿ ಇದರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದು ಕೊಳ್ಳಲಾಗುವುದು.

(4) ಸಂಜಯಗಾಂಧಿ ಆಸ್ಪತ್ರೆಯಲ್ಲಿ ನಡೆದಿರುವ ಅವ್ಯವಹಾರ.

ಶ್ರೀ ಯು. ಆರ್. ಸಭಾಪತಿ (ಉಡುಪಿ ಕ್ಷೇತ್ರ) :- ಸನ್ಮಾನ್ಯ ಉಪಾಧ್ಯಕ್ಷರೇ, ಅಪಘಾತಕ್ಕೆ ಒಳಗಾಗಿ ಕೈಕಾಲು ಕಳೆದಕೊಂಡು ಬರುವ ರೋಗಿಗಳಿಗಾಗಿ ತುರ್ತು ಚಿಕಿತ್ಸೆ ನೀಡುವ ಉದ್ದೇಶದಿಂದ ತೆರೆದಿರುವ ಸಂಜಯಗಾಂಧಿ ಅಪಘಾತ ಆಸ್ಪತ್ರೆಯಲ್ಲಿ 1992 ಜೂನ್ ನಲ್ಲಿ ಡಾ : ಆರ್. ಎ. ಪರುಂಗುದಾಸ್, ಆಡಳಿತ ಮುಖ್ಯಸ್ಥರಾಗಿ ನೇಮಕಗೊಂಡ ಮೇಲೆ ಆಗಿರತಕ್ಕಂಥ ಅವ್ಯವಸ್ಥೆಯ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ? ಅವರ ನೇಮಕಾತಿ ಮತ್ತು ಅವ್ಯವಸ್ಥೆಯ ಬಗ್ಗೆ ಸಾಕಷ್ಟು ಮನವಿಗಳನ್ನು ಮುಖ್ಯಮಂತ್ರಿಗಳಿಗೆ ಹಾಗೂ ಆರೋಗ್ಯ ಸಚಿವರಿಗೆ ಸಲ್ಲಿಸಿದ್ದರೂ ಸದರಿ ಆಸ್ಪತ್ರೆಯಲ್ಲಿ ಆಗಿರುವ ಅವ್ಯವಸ್ಥೆಯ ಅಚಾತುರ್ಯಗಳಿಗೆ ಕಾರಣರಾಗಿರುವ ಡಾ : ಪರುಂಗುದಾಸ್ ವಿರುದ್ಧ ಕ್ರಮಕೈಗೊಳ್ಳಲು ಸರ್ಕಾರದ ವಿಳಂಬ ನೀತಿಗೆ ಕಾರಣಗಳೇನು?

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) (ಆರೋಗ್ಯ ಸಚಿವರ ಪರವಾಗಿ) :- 1984 ರಲ್ಲಿ ಸಂಜಯಗಾಂಧಿ ಆಸ್ಪತ್ರೆಯನ್ನು ರಸ್ತೆ ಅಪಘಾತ ದಲ್ಲಿ ಗಾಯಗೊಂಡವರಿಗೆ ತುರ್ತು ಚಿಕಿತ್ಸೆ ನೀಡಿ ಅವರನ್ನು ಪ್ರಾಣಾಪಾಯದಿಂದ ಪಾರು ಮಾಡುವ ಉದ್ದೇಶದಿಂದ ಪ್ರಾರಂಭ ಮಾಡಲಾಯಿತು. ತದನಂತರ ತಾತ್ಕಾಲಿಕವಾಗಿ ಜಯನಗರ ಸಾರ್ವಜನಿಕ ಆಸ್ಪತ್ರೆಯ ಕಟ್ಟಡದ ಒಂದು ಭಾಗವನ್ನು ಈ ಆಸ್ಪತ್ರೆಯ ಉಪಯೋಗಕ್ಕಾಗಿ ಪಡೆಯಲಾಯಿತು.

ಈ ಆಸ್ಪತ್ರೆಯ ಬಗ್ಗೆ ಸರ್ಕಾರಕ್ಕೆ ಆಗ್ಗಿಂದಾಗ್ಗೆ ಹಲವಾರು ದೂರುಗಳು ಬಂದಿರುತ್ತವೆ. ದಿನಾಂಕ 21-8-92 ರ ಅಂದಾಜು ಸಮಿತಿಯ ವರದಿಯಲ್ಲಿಯೂ ಸಹ ಈ ಆಸ್ಪತ್ರೆಯ ದುರಾಡಳಿತ ಬಗ್ಗೆ ಆಕ್ಷೇಪಣೆಯನ್ನು ವ್ಯಕ್ತಪಡಿಸಿರುತ್ತದೆ. ಇತ್ತೀಚೆಗೆ ಈ ಸಂಸ್ಥೆಯ ಕೆಲವು ಸಿಬ್ಬಂದಿ ವರ್ಗದವರು ಸರ್ಕಾರಕ್ಕೆ ಸಂಸ್ಥೆಯ ಬಗ್ಗೆ ದೂರು ಸಲ್ಲಿಸಿರುತ್ತಾರೆ.

ಸಂಜಯಗಾಂಧಿ ಆಪಘಾತ ಆಸ್ಪತ್ರೆ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕರು, ಅಂದಾಜು ಸಮಿತಿಯ ವರದಿಯಲ್ಲಿನ ಆಕ್ಷೇಪಣೆಗಳ ಬಗ್ಗೆ ವಿವರವಾದ ಉತ್ತರಗಳನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ಸರ್ಕಾರವು ಈ ಉತ್ತರಗಳನ್ನು ಪರಿಶೀಲಿಸಲಾಗುತ್ತಿದೆ. ಆಸ್ಪತ್ರೆಯ ಸಿಬ್ಬಂದಿ ವರ್ಗದ ವರು ನೀಡಿರುವ ದೂರಿನ ಬಗ್ಗೆ ವಿಚಾರಣೆ ನಡೆಸಿ ವರದಿ ಸಲ್ಲಿಸುವಂತೆ ಹಿಂದಿನ ಬೆಂಗಳೂರು ವಿಭಾಗಾಧಿಕಾರಿಗಳಿಗೆ ತಿಳಿಸಲಾಗಿತ್ತು. ಅದರಂತೆ ವಿಚಾರಣೆ ನಡೆಸಿ, ವಿಭಾಗಾಧಿಕಾರಿಗಳು ವರದಿಯನ್ನು ಸಲ್ಲಿಸಿರುತ್ತಾರೆ. ಈ ವರದಿಯನ್ನು ಸರ್ಕಾರವು ತೀವ್ರಗತಿಯಲ್ಲಿ ಪರಿಶೀಲಿಸುತ್ತಿದೆ.

ಈ ಸಂಸ್ಥೆಯ ಕಾರ್ಯವೈಖರಿಯನ್ನು ಸುವ್ಯವಸ್ಥೆಗೊಳಿಸಲು ಸರ್ಕಾರವು ಕ್ರಮ ಕೈಗೊಳ್ಳ ಲಾಗುತ್ತಿದೆ. ಹಾಗೂ ಈ ಆಸ್ಪತ್ರೆಯ ಆವ್ಯವಸ್ಥೆಯ ಬಗ್ಗೆ ಸರ್ಕಾರದ ಗಮನಕ್ಕೆ ಬಂದಾಗ, ಸರ್ಕಾರವು ಕಟ್ಟುನಿಟ್ಟಾದ ಕ್ರಮವನ್ನು ಕೈಗೊಳ್ಳುವುದೆಂದು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

1984 ರಲ್ಲಿ ಪ್ರಾರಂಭಗೊಂಡ ಈ ಆಸ್ಪತ್ರೆಯ ಮುಖ್ಯ ಕಟ್ಟಡದ ನಿರ್ಮಾಣ ಕಾರ್ಯವು ಇನ್ನೂ ಪೂರ್ಣಗೊಂಡಿಲ್ಲದಿರುವ ಬಗ್ಗೆ ದೂರುಗಳು ಇವೆ. ಹಾಗೂ 1987 ರಲ್ಲಿ ಉದ್ಘಾಟಿಸಲಾದ ಪಿಜಿಯೋಥೆರಪಿ ವಿಭಾಗವು ಕಾರ್ಯನಿರ್ವಿಹಿಸುತ್ತಿಲ್ಲದಿರುವುದು ಈ ಬಗ್ಗೆ ಸರ್ಕಾರವು ಎರಡೂ ಕಟ್ಟಡಗಳು ಪೂರ್ಣಗೊಳ್ಳಲು ಹಾಗೂ ಕಾರ್ಯಾಚರಣೆಗೊಳ್ಳಲು ಶೀಘ್ರವಾಗಿ ಕ್ರಮ ಕೈಗೊಳ್ಳ ಲಾಗುವುದು.

ಶಾಸನ ರಚನೆ ಕಾರ್ಯಕಲಾಪಗಳು

(ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು)

(1) ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ವಿಧೇಯಕ, 1995

ಪರ್ಯಾಲೋಚನಾ ಪ್ರಸ್ತಾವ

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಮಂತ್ರಿಗಳು) :- ಮಾನ್ಯ ಉಪಾಧ್ಯಕ್ಷರೇ, 1995 ರ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ವಿಧೇಯಕ ವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಮಂತ್ರಿಗಳು) :- ಮಾನ್ಯ ಉಪ ಸಭಾಪತಿಗಳೇ, ಭಾರತದ ಸರ್ವೋಚ್ಚ ನ್ಯಾಯಾಲಯದ ಮಂಡಲ ಆಯೋಗದ ವರದಿಯ ಮೇರೆಗೆ 1992 ರ ತೀರ್ಪಿನ ಮೇರೆಗೆ ಪ್ರತಿಯೊಂದು ರಾಜ್ಯದಲ್ಲಿ ಒಂದು ಶಾಶ್ವತವಾದ ಆಯೋಗವನ್ನು ರಚನೆ ಮಾಡಬೇಕು ಎನ್ನತಕ್ಕಂಥ ಒಂದು ಹಿನ್ನೆಲೆಯಲ್ಲಿ ಈ ಶಾಸನವನ್ನು ನಾನು ತೆಗೆದುಕೊಂಡು ಬಂದಿದ್ದೇನೆ. ಇದಕ್ಕೆ ಹಿಂದುಳಿದ ವರ್ಗದ ಜನಾಂಗದ